KARN010021082024

M H ANNAYYANAVAR
Digitally signed by M H ANNAYYANAVAR
Date: 2025.12.19 16:33:54 +0530

**I.A.No.7 & 8**
Presented on : 25-04-2025
Decided on : 19-12-2025
Duration : 08 months, 25 days

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.

**:ಉಪಸ್ಥಿತರು:**

ಶ್ರೀಯುತ ಎಂ.ಹೆಚ್. ಅಣ್ಣಯ್ಯನವರ, ಬಿಕಾಂ.ಎಲ್.ಎಲ್.ಬಿ. (ವಿಶೇಷ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

**ದಿನಾಂಕ 19 ನೇ ಡಿಸೆಂಬರ್ ಮಾಹೆ 2025**

**ಕಮರ್ಷಿಯಲ್ ಎಕ್ಸಿಕ್ಯೂಷನ್ ಸಂಖ್ಯೆ 3/2024**

ಡಿ.ಹೆಚ್.ಆರ್. : ಮೆಸರ್ಸ್ ಶಾರದಾ ಹೋಟೆಲ್ಸ್,
ಮತ್ತು ಕನ್ವೆನ್‌ಷನ್ ಸೆಂಟರ್.
(ಪರವಾಗಿ ಶ್ರೀ ಕೆ.ಎಸ್., ವಕೀಲರು)

- ವಿರುದ್ಧ -

ಜೆ.ಡಿ.ಆರ್. : ಮೆಸರ್ಸ್ ಸಮೇಕ್ಸ್ ಕನ್‌ಪೆಕ್ಷನೆರೀಸ್
ಇಂಡಿಯಾ ಪ್ರೈವೇಟ್ ಲಿಮಿಟೆಡ್,
(ಗೈರು ಹಾಜರಿ)

ಅಬ್‌ಸ್ಟ್ರಕ್ಟರ್: ಶ್ರೀಮತಿ ಕನುಪ್ರಿಯಾ ಕೇಡಿಯಾ,
ಕೋಂ.ರೂಪೇಶ್ ಕೇಡಿಯಾ,
ವಯಸ್ಸು ಸುಮಾರು 41 ವರ್ಷ,
ನಿರ್ದೇಶಕರು ಮತ್ತು ಅಧಿಕೃತ ಸಹಿದಾರರು,
ಮೆಸರ್ಸ್ ಸಮೇಕ್ಸ್ ಕನ್‌ಪೆಕ್ಷನೆರೀಸ್
ಇಂಡಿಯಾ ಪ್ರೈವೇಟ್ ಲಿಮಿಟೆಡ್,
(ಪರವಾಗಿ ಶ್ರೀ ಆರ್.ಪಿ.ಎಂ., ವಕೀಲರು)

*****

<u>ಮಧ್ಯಂತರ ಅರ್ಜಿ **7** ಮತ್ತು **8** ರ ಪಕ್ಷಗಾರರು</u>

ಅಬ್‌ಸ್ಟ್ರಕ್ಟರ್‌: ಶ್ರೀಮತಿ ಕನುಪ್ರಿಯಾ ಕೇಡಿಯಾ,
ಕೋಂ.ರೂಪೇಶ್ ಕೇಡಿಯಾ,
ವಯಸ್ಸು ಸುಮಾರು 41 ವರ್ಷ,
ನಿರ್ದೇಶಕರು ಮತ್ತು ಅಧಿಕೃತ ಸಹಿದಾರರು,
ಮೆಸರ್ಸ್ ಸಮೇಕ್ಸಿ ಕನ್‌ಫೆಕ್ಷನೆರೀಸ್
ಇಂಡಿಯಾ ಪ್ರೈವೇಟ್ ಲಿಮಿಟೆಡ್,

// ವಿರುದ್ಧ //

<u>ಡಿ.ಹೆಚ್.ಆರ್.</u> : ಮೆಸರ್ಸ್ ಶಾರದಾ ಹೋಟೆಲ್ಸ್,
ಮತ್ತು ಕನ್ವೆನ್‌ಷನ್ ಸೆಂಟರ್.

*****

## <u>ಮಧ್ಯಂತರ ಅರ್ಜಿ **7** ಮತ್ತು **8** ರ ಮೇಲೆ ಆದೇಶ</u>

ಅಬ್‌ಸ್ಟ್ರಕ್ಟರ್ ಇವರು ಮಾನ್ಯ ನ್ಯಾಯಾಲಯಕ್ಕೆ ಮಧ್ಯಂತರ ಅರ್ಜಿ 7 ಸಿವಿಲ್ ಪ್ರಕ್ರಿಯಾ ಸಂಹಿತೆ ಆಜ್ಞೆ 21 ನಿಯಮ 58 ಸಹ ಕಲಂ.151 ರಡಿ ಅರ್ಜಿ ಪ್ರಮಾಣ ಪತ್ರ ಸಲ್ಲಿಸಿ, ಮಾನ್ಯ ನ್ಯಾಯಾಲಯವು ದಿನಾಂಕಃ25.01.2025 ರಂದು ಮಾಡಿದ ಆದೇಶವನ್ನು ತೆರವುಗೊಳಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

2. ಅದೇ ಪ್ರಕಾರ ಮಧ್ಯಂತರ ಅರ್ಜಿ 8 ಸಿವಿಲ್ ಪ್ರಕ್ರಿಯಾ ಸಂಹಿತೆ ಆಜ್ಞೆ 21 ನಿಯಮ 97 ಮತ್ತು 101 ಸಹ ಕಲಂ.151 ರಡಿ ಅರ್ಜಿ ಪ್ರಮಾಣ ಪತ್ರ ಸಲ್ಲಿಸಿ, ಸದರಿ ಅಬ್‌ಸ್ಟ್ರಕ್ಟರ್ ಅನ್ನು ಈ ಪ್ರಕರಣದಲ್ಲಿ ಸೇರ್ಪಡೆ ಮಾಡಲು ಅನುಮತ ನೀಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

3. ಸದರಿ ಅರ್ಜಿಗೆ ಡಿ.ಹೆಚ್.ಆರ್. ಪರ ವಕೀಲರು ಪ್ರತ್ಯೇಕವಾಗಿ ತಕರಾರನ್ನು ಸಲ್ಲಿಸಿ, ಅರ್ಜಿ ಪ್ರಮಾಣ ಪತ್ರದಲ್ಲಿ ಬರೆದಂತ ವಿಷಯಗಳು ಸಂಪೂರ್ಣ ಸುಳ್ಳಿನಿಂದ ಕೂಡಿದ್ದು, ಸದರಿ ಪ್ರಕರಣ ಮುಂದೂಡಬೇಕೆಂಬ ಏಕೈಕ ಉದ್ದೇಶದಿಂದ ಈ ಅರ್ಜಿ ಸಲ್ಲಿಸಿರುವುದರಿಂದ ಸದರಿ ಅರ್ಜಿಗಳನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ತಕರಾರು ಸಲ್ಲಿಸಿರುತ್ತಾರೆ.

4. ಅರ್ಜಿ, ತಕರಾರು ಹಾಗೂ ಉಭಯ ವಕೀಲರ ವಾದವನ್ನು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆಃ-

1. ಅಬ್‌ಸ್ಟ್ರಕ್ಟರ್ ಪರ ವಕೀಲರು ಸಲ್ಲಿಸಿದ ಮಧ್ಯಂತರ ಅರ್ಜಿ 7 ಮತ್ತು 8 ಅನ್ನು ಪುರಸ್ಕರಿಸಬಹುದೇ ?
2. ಯಾವ ಆದೇಶ ?

5. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

ಅಂಶ ನಂ.1 : ನಕಾರಾತ್ಮಕವಾಗಿ
ಅಂಶ ನಂ.2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ:

## ಕಾರಣಗಳು

6. ಅಂಶ ಸಂಖ್ಯೆ **1:** ಡಿ.ಹೆಚ್.ಆರ್. ಇವರು ಬೆಂಗಳೂರಿನ 10 ನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯ (ಕಮರ್ಷಿಯಲ್ ಕೋರ್ಟ್) ಬೆಂಗಳೂರು ನ್ಯಾಯಾಲಯದಲ್ಲಿ ಜೆ.ಡಿ.ಆರ್. ವಿರುದ್ಧ ಅಸಲು ದಾವಾ ನಂ.60/2023 ಸ್ವಾಧೀನ ಮತ್ತು ಬಾಡಿಗೆ ಬಾಕಿ ಹಣ ವಸೂಲಿ ಕುರಿತು ದಾವೆ ದಾಖಲು ಮಾಡಿದ್ದು ಸದರಿ ದಾವೆಯಲ್ಲಿ ಉಭಯ ಪಕ್ಷಗಾರರ ವಿಚಾರಣೆಯಾಗಿ ನ್ಯಾಯಾಲಯವು ದಿನಾಂಕಃ12.08.2024 ರಂದು ಭಾಗಶಃ ಡಿಕ್ರಿ ಮಾಡಲಾಗಿರುತ್ತದೆ. ಸದರಿ ಡಿಕ್ರಿಯಲ್ಲಿ ಜೆ.ಡಿ.ಆರ್. ಇವರು ಡಿ.ಹೆಚ್.ಆರ್. ಇವರಿಗೆ ರೂ.41,77,200-00 ಹಣವನ್ನು ದಾವೆ ದಾಖಲು ಮಾಡಿದ ದಿನಾಂಕದಿಂದ ಸಂಪೂರ್ಣ ಹಣ ಮುಗಿಯುವವರೆಗೆ ವಾರ್ಷಿಕ ಶೇ.12 ಬಡ್ಡಿ ದರದಂತೆ ಹಣವನ್ನು ಕೊಡಲು ಡಿಕ್ರಿ ಮಾಡಲಾಗಿರುತ್ತದೆ. ಸದರಿ ಡಿಕ್ರಿಯ ಪ್ರಕಾರ ಜಾರಿ ಪ್ರಕರಣ ದಾಖಲು ಮಾಡಿದ್ದು ನ್ಯಾಯಾಲಯದ ವ್ಯಾಪ್ತಿಗೆ ಸಂಬಂಧಪಟ್ಟಂತೆ ಡಿಕ್ರಿ ಮಾನ್ಯ ನ್ಯಾಯಾಲಯಕ್ಕೆ ವರ್ಗಾವಣೆ ಆಗಿ ಬಂದ ನಂತರ ಮಾನ್ಯ ನ್ಯಾಯಾಲಯದಲ್ಲಿ ಈ ಪ್ರಕರಣ ದಾಖಲಾಗಿರುತ್ತದೆ.

7. ನಂತರ ಡಿ.ಹೆಚ್.ಆರ್. ಇವರು ಮಾನ್ಯ ನ್ಯಾಯಾಲಯಕ್ಕೆ ಸಿವಿಲ್ ಪ್ರಕ್ರಿಯಾ ಸಂಹಿತೆ ಆಜ್ಞೆ 21 ನಿಯಮ 58 ರಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ನೋಟೀಸು ಜೆ.ಡಿ.ಆರ್.

ಇವರಿಗೆ ಕಳುಹಿಸಿದ್ದು ಸದರಿ ನೋಟೀಸು ಜಾರಿಯಾಗಿದ್ದು ಯಾವುದೇ ತಕರಾರು ಸಲ್ಲಿಸದೇ ಇರುವುರಿಂದ ಸದರಿ ಡಿಕ್ರಿಯಾಗಿ 2 ವರ್ಷದ ಒಳಗೆ ಈ ಪ್ರಕರಣ ದಾಖಲಾಗಿರುವುದರಿಂದ ಕಾಸ್ ನೋಟೀಸ್ ಕಳುಹಿಸುವುದನ್ನು ಮನ್ನಿಸಿ ಜೆ.ಡಿ.ಆರ್. ಇವರಿಗೆ ಸಂಬಂಧಪಟ್ಟಂತ ಸ್ಥಿರ ಸ್ವತ್ತನ್ನು ಜಪ್ತಿ ಮಾಡಲು ದಿನಾಂಕ 25.01.2025 ರಂದು ಆದೇಶ ಮಾಡಲಾಗಿರುತ್ತದೆ.

8. ಸದರಿ ಆದೇಶ ಆದ ನಂತರ ಈಗ ಅಬ್‌ಸ್ಟ್ರಕ್ಟರ್ ರವರು ಈ ಅರ್ಜಿ ಸಲ್ಲಿಸಿರುತ್ತಾರೆ. ಸಿವಿಲ್ ಪ್ರಕ್ರಿಯಾ ಸಂಹಿತೆ ಆಜ್ಞೆ 21 ನಿಯಮ 97 ಕಾನೂನನ್ನು ಪರಿಶೀಲಿಸಲಾಗಿ, "ಸ್ಥಿರ ಸ್ವತ್ತಿನ ಸ್ವಾಧೀನತೆಗಾಗಿ ಡಿಕ್ರಿಯನ್ನು ಪಡೆದಿರುವವನನ್ನು ಅಥವಾ ಡಿಕ್ರಿಯ ಅಮಲ್ ಜಾರಿಯಲ್ಲಿ ಮಾರಾಟವಾದ ಯಾವುದೇ ಅಂತಹ ಸ್ವತ್ತಿನ ಖರೀಧಿದಾರನನ್ನು ಅವರ ಸ್ವತ್ತಿನ ಸ್ವಾಧೀನವನ್ನು ಪಡೆಯುವಾಗ ಯಾವುದೇ ವ್ಯಕ್ತಿಯು ಪ್ರತಿರೋಧಿಸಿದ್ದಲ್ಲಿ ಅಥವಾ ಅಡ್ಡಿ ಪಡಿಸಿದ್ದಲ್ಲಿ ಅಂತಹ ಪ್ರತಿರೋಧ ಅಥವಾ ಅಡ್ಡಿಯ ಬಗ್ಗೆ ದೂರುದಾರ ಮಾನ್ಯ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು" ಅಂತ ಕಾನೂನು ಇರುತ್ತದೆ. ಆಸ್ತಿಯನ್ನು ವಶಪಡಿಸಿಕೊಳ್ಳಲು ಯಾರು ಅಡ್ಡಿಪಡಿಸುವರೋ ಅವರ ವಿರುದ್ಧ ನ್ಯಾಯಾಲಯದಲ್ಲಿ ಪ್ರಶ್ನಿಸಲು ಮತ್ತು ಅಡೆ ತಡೆಯನ್ನು ನಿವಾರಿಸಲು ಅವಕಾಶ ಇರುತ್ತದೆ.

9. ಸದರಿ ಕಾನೂನು ಪ್ರಕಾರ ಅರ್ಜಿ ಸಲ್ಲಿಸಿದಂತ ಅಬ್‌ಸ್ಟ್ರಕ್ಟರ್ ಇವರು ಜೆ.ಡಿ.ಆರ್. ಕಂಪನಿಯ ಡೈರೆಕ್ಟರ್ ಆದ ರೂಪೇಶ್ ಕೇಡಿಯಾ ಇವರ ಪತ್ನಿಯಾಗಿರುತ್ತಾರೆ. ಸದರಿ ದಾವೆಯಲ್ಲಿ ನೀಡಿದಂತ ಮಾಹಿತಿ ಬಗ್ಗೆ ಸಂಪೂರ್ಣ ಗೊತ್ತಿದ್ದು ಡಿಕ್ರಿಯಾದ ನಂತರ ಹಾಗೂ ಡಿಕ್ರಿಯಾಗುವುದಕ್ಕಿಂತ ಪೂರ್ವದಲ್ಲಿ ಯಾವುದೇ ರೀತಿಯ ತಕರಾರನ್ನು ಮಾಡದೆ ಹಾಗೂ ಅರ್ಜಿಯನ್ನು ಸಲ್ಲಿಸದೆ ಈಗ ನಾನು ಜೆ.ಡಿ.ಆರ್. ಕಂಪನಿಯ ಒಬ್ಬ ನಿರ್ದೇಶಕರಾಗಿದ್ದು, ನನ್ನನ್ನು ಪಕ್ಷಗಾರರನ್ನಾಗಿ ಮಾಡದೆ ಡಿಕ್ರಿ ಪಡೆದುಕೊಂಡಿದ್ದು ಈಗ ನನ್ನನ್ನು ಈ ಪ್ರಕರಣದಲ್ಲಿ ಸೇರ್ಪಡೆ ಮಾಡಬೇಕು ಅಂತ ಸಲ್ಲಿಸಿದಂತ ಅರ್ಜಿ ಮೇಲ್ನೋಟಕ್ಕೆ ವಜಾ ಆಗತಕ್ಕದ್ದು. ಕಾರಣ ಸದರಿ ಜೆ.ಡಿ.ಆರ್. ಇವರ ಪತ್ನಿ ಅಬ್‌ಸ್ಟ್ರಕ್ಟರ್ ಆಗಿರುವುದರಿಂದ ಇಬ್ಬರೂ ಕೂಡಿಯೇ ವಾಸವಾಗಿದ್ದು ಸದರಿ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದು

ಡಿಕ್ರಿ ಆದ ನಂತರ ಕಂಪನಿಯ ಸ್ವಾಧೀನವನ್ನು ಜಪ್ತಿ ಮಾಡಲು ಆದೇಶ ಮಾಡಿದ ನಂತರ ಈಗ ಈ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿ ಕಾನೂನು ಪ್ರಕಾರ ನಿಲ್ಲತಕ್ಕದ್ದಲ್ಲ.

10. ನ್ಯಾಯಾಲಯವು ಕಂಪನಿಯ ಸ್ವತ್ತನ್ನು ಜಪ್ತಿ ಮಾಡಲು ಆದೇಶ ಮಾಡಿರುತ್ತದೆಯೇ ವಿನಃ ಕಂಪನಿಯ ನಿರ್ದೇಶಕರ ಯಾವುದೇ ವೈಯಕ್ತಿಕ ಸ್ವತ್ತನ್ನು ಜಪ್ತಿ ಮಾಡಲು ಆದೇಶ ಮಾಡಿರುವುದಿಲ್ಲ. ಸದರಿ ಅಬ್‌ಸ್ಟ್ರಕ್ಟರ್ ಇವರ ಸ್ವಂತ ಆಸ್ತಿಯಲ್ಲಿ ಜಪ್ತಿ ಮಾಡಲು ಆದೇಶವಾಗಿರುವುದಿಲ್ಲ. ಸದರಿ ಕಂಪನಿ ಖಾಸಗಿ ಕಂಪನಿ ಆಗಿದ್ದು, ಕಂಪನಿ ಕಾನೂನು ಅಡಿಯಲ್ಲಿ ಕಾರ್ಯ ನಿರ್ವಹಣೆಗೆ ಸಂಬಂಧಪಟ್ಟಂತ ಸ್ವತ್ತನ್ನು ಜಪ್ತಿ ಮಾಡಲು ಆದೇಶ ಮಾಡಲಾಗಿದೆಯೆ ವಿನಃ ಅಬ್‌ಸ್ಟ್ರಕ್ಟರ್ ಆಸ್ತಿಯನ್ನು ಜಪ್ತಿ ಮಾಡಲು ಆದೇಶ ಮಾಡಿರುವುದಿಲ್ಲ. ಸದರಿ ಅಬ್‌ಸ್ಟ್ರಕ್ಟರ್ ಇವರಿಗೆ ಕಂಪನಿಯ ನಿಯಮಗಳ ಬಗ್ಗೆ ಹಾಗೂ ನಿರ್ದೇಶಕರ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ಹೀಗಿದ್ದಾಗ್ಯೂ ಸಹ ಸದರಿ ಸ್ವತ್ತಿನ ಮಾಲೀಕ ಡಿ.ಹೆಚ್.ಆರ್. ಇರುತ್ತಾರೆ ಅಂತ ಗೊತ್ತಿದ್ದು ಈಗ ಡಿ.ಹೆಚ್.ಆರ್. ಇವರು ಡಿಕ್ರಿಯ ಪ್ರಕಾರ ಜೆ.ಡಿ.ಆರ್. ಕಡೆಯಿಂದ ಹಣ ವಸೂಲಿ ಕುರಿತು ಅರ್ಜಿ ದಾಖಲು ಮಾಡಿದ್ದು ಜೆ.ಡಿ.ಆರ್. ರವರಿಗೆ ಡಿ.ಹೆಚ್.ಆರ್. ಹಣವನ್ನು ಕೊಡದೇ ತನ್ನ ಪತ್ನಿಯ ಕಡೆಯಿಂದ ಈ ಅರ್ಜಿಯನ್ನು ಸಲ್ಲಿಸಿ ತಾನೂ ಸಹ ಕಂಪನಿಯ ನಿರ್ದೇಶಕರಾಗಿದ್ದು ನನ್ನನ್ನೂ ಪಕ್ಷಗಾರರನ್ನಾಗಿ ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿ ಕಾನೂನು ರೀತಿಯಿಂದಾಗಲೀ, ವಸ್ತುಸ್ಥಿತಿಯಿಂದಾಗಲೀ ನಿಲ್ಲತಕ್ಕದ್ದಲ, ಮೇಲ್ನೋಟಕ್ಕೆ ವಜಾ ಆಗತಕ್ಕದ್ದು.

11. ನ್ಯಾಯಾಲಯದಿಂದ ಸಮನ್ಸ್ ಅನ್ನು ಜೆ.ಡಿ.ಆರ್. ಇವರಿಗೆ ಕಳುಹಿಸಿದ್ದು, ಸಮನ್ಸ್ ಅನ್ನು ಜೆ.ಡಿ.ಆರ್. ಇವರು ಪಡೆದುಕೊಂಡಿರುವುದಿಲ್ಲ. ನಂತರ ವಿಶೇಷ ಬೇಲಿಫ್ ನೇಮಕ ಮಾಡಿಕೊಟ್ಟಿದ್ದು, ಆಗಲೂ ಸಹ ಸಮನ್ಸ್ ಅನ್ನು ಜಾರಿ ಮಾಡಲಾಗಿರುವುದಿಲ್ಲ. ಜೆ.ಡಿ.ಆರ್. ಇವರು ಡಿ.ಹೆಚ್.ಆರ್. ಇವರಿಗೆ ಹಣ ಕೊಡಲು ವಿಪಲರಾಗಿದ್ದು, ಈಗ ರೂ.2,20,44,129-00 ಹಣವನ್ನು ಕೊಡದೇ ಇರುವುದರಿಂದ ಈಗ ತನ್ನ ಪತ್ನಿ ಕಡೆಯಿಂದ

ಈ ಅರ್ಜಿ ಸಲ್ಲಿಸಿ ಪ್ರಕರಣವನ್ನು ಮುಂದೂಡುವ ಉದ್ದೇಶ ಹೊಂದಿರುತ್ತಾರೆ ಎನ್ನುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

12. ಸದರಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಅಬ್‌ಸ್ಟ್ರಕ್ಟರ್ ಇವರಿಗೆ ಆಸಕ್ತಿ ಇದ್ದ ಬಗ್ಗೆ ಅವರ ಹೆಸರಿನಲ್ಲಿ ಕ್ರಯ ಪತ್ರ ಆಗಿದ್ದ ಬಗ್ಗೆ ಅಥವಾ ಕಂದಾಯ ದಾಖಲಾತಿಗಳು ಇದ್ದ ಬಗ್ಗೆ, ಕಂಪನಿಗೆ ಸೇರಿದ ಸ್ವತ್ತು ತನಗೆ ಸೇರಿದ ಸ್ವತ್ತು ಇರುತ್ತದೆ ಎಂಬುದರ ಬಗ್ಗೆ ಒಂದೂ ದಾಖಲೆಯನ್ನು ಸಹ ಹಾಜರುಪಡಿಸದೆ ಕೇವಲ ಅರ್ಜಿ ಪ್ರಮಾಣ ಪತ್ರ ಸಲ್ಲಿಸಿ ನ್ಯಾಯಾಲಯವು ಜಪ್ತಿಗೊಳಿಸಿದ್ದನ್ನು ತೆರವುಗೊಳಿಸಿ ನನ್ನನ್ನು ಈ ಕೇಸಿನಲ್ಲಿ ಸೇರ್ಪಡೆ ಮಾಡಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆಯೇ ವಿನಃ ಅದಕ್ಕೆ ಪೂರಕವಾದಂತ ಯಾವುದೇ ದಾಖಲೆಯನ್ನು ಹಾಜರುಪಡಿಸದೇ ಇರುವುದರಿಂದ ಸದರಿ ಅಬ್‌ಸ್ಟ್ರಕ್ಟರ್ ಇವರು ಈ ಪ್ರಕರಣದಲ್ಲಿ ಅವಶ್ಯಕ ಪಕ್ಷಗಾರರಾಗಿರುವುದಿಲ್ಲ, ಹಕ್ಕು ಕಿತಾಸಕ್ತಿ ಇರುವುದಿಲ್ಲ. ಕಂಪನಿಯ ಸ್ವತ್ತು ಬೇರೆ, ನಿರ್ದೇಶಕರ ಸ್ವತ್ತು ಬೇರೆ ಇರುವುದರಿಂದ ಸದರಿ ಅರ್ಜಿಯ ಸದರಿ ಅಬ್‌ಸ್ಟ್ರಕ್ಟರ್ ವಿಚಾರಣೆ ಮಾಡುವ ಅವಶ್ಯಕತೆ ಇಲ್ಲದೇ ಇರುವುದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಸಕಾರಣಗಳು ಇರುವುದಿಲ್ಲ.

13. ಡಿ.ಹೆಚ್.ಆರ್. ಪರ ವಕೀಲರು <u>1958 SCC OnLine Cal 142, Basanta Kumar Roy – vs – Charu Chandra Pai and Ors</u> ಹಾಜರುಪಡಿಸಿದ್ದು, ಸದರಿ ತೀರ್ಪು ಸಿವಿಲ್ ಪ್ರಕ್ರಿಯಾ ಸಂಹಿತೆ ಆಜ್ಞೆ 21 ನಿಯಮ 90 ರ ಅರ್ಜಿಯ ಮೇಲೆ ಆದಂತ ತೀರ್ಪು ಆಗಿದ್ದು, corporator ಮತ್ತು corporation ಗೆ ಸಂಬಂಧಪಟ್ಟಂತ ಪ್ರಕರಣವಾಗಿದ್ದು, ಸದರಿ ತೀರ್ಪಿನ ಪ್ಯಾರಾ-12 ರಲ್ಲಿ <u>**"A corporator is not the corporation, which is a distinct legal person. In the assets of a corporation,its shareholders have no legal or equitable interest"**</u> ಅಂತಾ ತೀರ್ಪಿನಲ್ಲಿ ನಮೂದಿಸಿರುವುದರಿಂದ, ಕಾರ್ಪೊರೇಟರ್ ಬೇರೆ ಕಾರ್ಪೊರೇಷನ್ ಬೇರೆ ಅಂತ ನಮೂದಾಗಿರುವುದರಿಂದ, ಅದೇ ಪ್ರಕಾರ ಜೆ.ಡಿ.ಆರ್. ಕಂಪನಿ ಬೇರೆ, ನಿರ್ದೇಶಕರು ಬೇರೆ ಇರುತ್ತಾರೆ. ಆದ್ದರಿಂದ ಸದರಿ ತೀರ್ಪಿನ ಪ್ರಕಾರವೂ ಸಹ ಅಬ್‌ಜಕ್ಟರ್ ಇವರು ಸಲ್ಲಿಸಿದ

ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಸಕಾರಣಗಳು ಇಲ್ಲದೇ ಇರುವುದರಿಂದ, ಸದರಿ ಅಂಶ ಸಂಖ್ಯೆ 1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

14. <u>ಅಂಶ ಸಂಖ್ಯೆ **2**</u>**:** ಅಂಶ ಸಂಖ್ಯೆ 1 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಃ

## <u>ಆದೇಶ</u>

ಅಬ್‌ಸ್ಟ್ರಕ್ಟರ್ ಇವರು ಮಧ್ಯಂತರ ಅರ್ಜಿ 7 ಸಿವಿಲ್ ಪ್ರಕ್ರಿಯಾ ಸಂಹಿತೆ ಆಜ್ಞೆ 21 ನಿಯಮ 58 ಸಹ ಕಲಂ.151 ಹಾಗೂ ಮಧ್ಯಂತರ ಅರ್ಜಿ 8 ಸಿವಿಲ್ ಪ್ರಕ್ರಿಯಾ ಸಂಹಿತೆ ಆಜ್ಞೆ 21 ನಿಯಮ 97 ಮತ್ತು 101 ಸಹ ಕಲಂ.151 ರಡಿಯಲ್ಲಿ ಸಲ್ಲಿಸಿದ ಅರ್ಜಿಗಳನ್ನು ವಜಾ ಮಾಡಲಾಯಿತು.

ಖರ್ಚಿನ ಮೇಲೆ ಯಾವುದೇ ಆದೇಶ ಇಲ್ಲ.

*(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ ಗ್ರೇಡ್ -1 ರವರಿಗೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ **19** ನೇ ಡಿಸೆಂಬರ್ ಮಾಹೆ **2025** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

(ಎಂ.ಹೆಚ್. ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.